ಬೈಂದೂರು ಪುರಸಭೆಗೆ ಸುರಕ್ಷಿತ ನಲ್ಲಿ ನೀರು ಸರಬರಾಜಿನ ಬಗ್ಗೆ.

೨೨೫ ಶ್ರೀ ಜಿ.ಎಸ್. ಆಚಾರ್(ಬೈಂದೂರು).—ಮಾನ್ಯ ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭ನೇ ವರ್ಷದಲ್ಲಿ ಬೈಂದೂರು ಪುರಸಭಾ ವಲಯಕ್ಕೆ ಸುರಕ್ಷಿತ ನಳದ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಮಾನ್ಯ ಸಚಿವರು ಕಳೆದ ವಿಧಾನ ಸಭಾಧಿವೇಶನದಲ್ಲಿ ಭರವಸೆ ಇತ್ತಿದ್ದರೂ ಈ ತನಕ ಆ ಯೋಜನೆ ಮಂಜೂರಾಗಿ ಕಾರ್ಯಾರಂಭವಾಗದಿರಲು ಕಾರಣವೇನು;

ಆ) ಅದನ್ನು ಯಾವಾಗ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೪೦ ೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಕಳೆದ ಅಧಿವೇಶನದ ಸಮಯದಲ್ಲೇ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ೧೯೮೬-೮೭ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೊಳ್ಳುತ್ತೇವೆ ಅಂತ. ಆದ್ದರಿಂದ ಆದಷ್ಟು ಬೇಗ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಈ ವರ್ಷವೇ ಕಾರ್ಯಾರಂಭ ಮಾಡಲಾಗುವುದೇ ಅಂತ ಒಂದು. ಎರಡನೆಯದಾಗಿ ಅಲ್ಲಿನ ಪುರಸಭೆಗೆ ಇತ್ತೀಚೆಗೆ ಒಂದು ಪತ್ರ "ಕರ್ನಾಟಕ ನಗರ ಪ್ರದೇಶ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯಿಂದ" ಬಂದಿದೆ. ೩೮ ಲಕ್ಷ ರೂಪಾಯಿಗಳ ಅನುದಾನವನ್ನು ಪುರಸಭೆಗೆ ಜೇರಾಗಿ ಕೊಡಬೇಕೆಂದು ಸೂಚನೆ ಬಂದಿದೆ. ಇದರಲ್ಲಿ ಅವಶ್ಯಕತೆ ಇದೆಯೇ ಚಿಕ್ಕಪುರಸಭೆಗಳಿಗೆ ಹಿಂದೆ ನೀಡಿದಂತಹ ರಿಯಾಯಿತಿಯನ್ನು ಈಗ ವಾಪಸ್ಸು ತೆಗೆದುಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ಕೇಳಿದರ ಬಗ್ಗೆ ನಾನು ವಿಚಾರಣೆ ಮಾಡಿ, ಸರಿಯಾದ ನಿರ್ಣಯವನ್ನು ಕೊಡುತ್ತೇನೆ. ಎರಡನೆಯದಾಗಿ ಮಾನ್ಯ ಸದಸ್ಯರು ತಡವಾಗಿದೆ ಅಂತ ಹೇಳಿದರು ತಡವಾಗುವುದಕ್ಕೆ ಕಾರಣ ೧೧.೫ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ, ಕೊಳಾಯಿ ನೀರನ್ನು ಸರಬರಾಜು ಮಾಡಬೇಕೆಂದು ೧೯೮೫ರಲ್ಲಿ ಆದಕ್ಕೆ ಒಪ್ಪಿಗೆ ಕೊಟ್ಟಿತ್ತು. ಆದರೆ ಇದಷ್ಟು ಆ ಊರಿನ ಜನ ತೆರೆದ ಬಾವಿಗಳಿಂದ ನೀರನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ನಮಗೆ ಕೊಳವೆ ಬಾವಿಗಳ ನೀರು ಬೇಕಾಗಿಲ್ಲ ಎಂಬುದಾಗಿ ಹೇಳಿದರು ಬಹುಶಃ ಉಪ್ಪು ನೀರು ಬರುತ್ತಿದೆ ಎನ್ನುವ ಕಾರಣಕ್ಕೋಸ್ಕರ ಅಂತ ಇರಬಹುದು. ಆದ್ದರಿಂದ ಆ ಅಂದಾಜನ್ನು ರೀ-ಕ್ಯಾಸ್ಟ್ ಮಾಡಿದಾಗ ೨೧ ಲಕ್ಷ ರೂಪಾಯಿಗಳ ಅಂದಾಜಾಯಿತು. ಆ ಕಾರಣಕ್ಕೋಸ್ಕರ ಸ್ವಲ್ಪ ತಡವಾಗಿದೆ. ಬೇರೆ ಇದನ್ನು ಕ್ರಮ ಕೈಗೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶಹಾಪುರ ತಾಲ್ಲೂಕಿನಲ್ಲಿ ನಿವೇಶನಗಳನ್ನು ಹಂಚುವ ಬಗ್ಗೆ.

೩೨೫. ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನಲ್ಲಿ ನಿವೇಶನಗಳಿಗಾಗಿ ಸರ್ಕಾರದವರು ವಶಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ರಚಿಸಲಾಗಿದೆ.

ಇ) ಸದರಿ ನಿವೇಶನಗಳಲ್ಲಿ ಎಷ್ಟು ನಿವೇಶನಗಳನ್ನು ಜನರಿಗೆ ಹಂಚಲಾಗಿದೆ.

ಈ) ಹಂಚಲು ಬಾಕಿ ಉಳಿದಿರುವ ನಿವೇಶನಗಳೆಷ್ಟು ?

ಉ) ಈ ನಿವೇಶನಗಳನ್ನು ಯಾವಾಗ ಹಂಚಲಾಗುವುದು ?